/446827/2023

ಕರ್ನಾಟಕ ಸರ್ಕಾರ
**ನಿರ್ದೇಶಕರ ಕಛೇರಿ,ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012**
**ಇ-ಮೇಲ್:commissioner.pue@gmail.com ಸ್ಥಿರ ದೂರವಾಣಿ ಸಂ:080-23562033**

ಸಂಖ್ಯೆ: E-1118140 DPUE-EST10PROM/7/2023-PLCY

ದಿನಾಂಕ: 30-06-2023

## ಜ್ಞಾಪನ

ವಿಷಯ: ಎದ್ದುಕಾಣುವ ಅಂಗವೈಕಲ್ಯವನ್ನುಳ್ಳ ಸರ್ಕಾರಿ ನೌಕರರಿಗೆ ಗುಂಪು-ಡಿ ಮತ್ತು ಗುಂಪು-ಸಿ ವೃಂದಗಳಿಗೆ ನೀಡುವ ಮುಂಬಡ್ತಿಯಲ್ಲಿ ಮೀಸಲಾತಿಯನ್ನು ಕಲ್ಪಿಸುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 121 ಸೇನೆನಿ 2020 ಬೆಂಗಳೂರು, ದಿನಾಂಕ: 28/03/2023
2. ಸರ್ಕಾರದ ಸೇರ್ಪಡೆ ಆದೇಶ ಸಂಖ್ಯೆ: ಸಿಆಸುಇ 121 ಸೇನೆನಿ 2020 ಬೆಂಗಳೂರು, ದಿನಾಂಕ: 01/04/2023

-*-

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ-(1) ಮತ್ತ ಉಲ್ಲೇಖ-(2)ರ ಸರ್ಕಾರದ ಆದೇಶಗಳನ್ವಯ ರಾಜ್ಯ ಸಿವಿಲ್ ಸೇವೆಗಳಲ್ಲಿನ ಗ್ರೂಪ್-ಡಿ ಮತ್ತು ಗ್ರೂಪ್-ಸಿ ವೃಂದಗಳಿಗೆ ಸೇರಿದ ಹುದ್ದೆಗಳಿಗೆ ನೀಡುವ ಮುಂಬಡ್ತಿಯಲ್ಲಿ ಎದ್ದುಕಾಣುವ ಅಂಗವೈಕಲ್ಯವನ್ನುಳ್ಳ ಸರ್ಕಾರಿ ನೌಕರರಿಗೆ ಶೇಕಡ 4 ರಷ್ಟು ಮೀಸಲಾತಿ ಆಸ್ಪದವನ್ನು ಕಲ್ಪಿಸಲಾಗಿರುತ್ತದೆ. (ಉಲ್ಲೇಖಗಳಲ್ಲಿನ ಆದೇಶದ ಪ್ರತಿಗಳನ್ನು ಲಗತ್ತಿಸಿದೆ)

ಪ್ರಸ್ತುತ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ / ಜಿಲ್ಲಾ ಉಪ ನಿರ್ದೇಶಕರ ಕಚೇರಿಗಳಲ್ಲಿ / ನಿರ್ದೇಶಕರ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗ್ರೂಪ್-ಡಿ ವೃಂದದ ಸರ್ಕಾರಿ ನೌಕರರಿಗೆ ಗ್ರೂಪ್-ಡಿ ವೃಂದದ ಹುದ್ದೆಯಾದ ಪರಿಚಾರಕರು ಮತ್ತು ಗ್ರೂಪ್-ಸಿ ವೃಂದದ ಹುದ್ದೆಯಾದ ದ್ವಿತೀಯದರ್ಜೆ ಸಹಾಯಕರು ಹುದ್ದೆಗಳಿಗೆ ಮುಂಬಡ್ತಿ ಪ್ರಕ್ರಿಯೆ ಪ್ರಾರಂಬಿಸಲಾಗಿದ್ದು, ಎದ್ದುಕಾಣುವ ಅಂಗವೈಕಲ್ಯವನ್ನುಳ್ಳ ಸರ್ಕಾರಿ ನೌಕರರಿಗೆ ಮುಂಬಡ್ತಿ ನೀಡಲು ನಿಗದಿಪಡಿಸಿದ ರೋಸ್ಟರ್‌ನ ಬಿಂದುಗಳ ಎದುರಾಗಿ ಮುಂಬಡ್ತಿಗೆ ಅರ್ಹರಾದ ಮತ್ತು ಸೂಕ್ತರಾದ ಎದ್ದುಕಾಣುವ ಅಂಗವೈಕಲ್ಯವನ್ನುಳ್ಳ ಸರ್ಕಾರಿ ನೌಕರರನ್ನು ಗುರುತಿಸಬೇಕಾಗಿರುತ್ತದೆ. ಅಲ್ಲದೇ ಗ್ರೂಪ್-ಸಿ ವೃಂದದ ಹುದ್ದೆಗಳಾದ ಪ್ರಥಮ ದರ್ಜೆ ಸಹಾಯಕರ ಹುದ್ದೆಗಳಿಗೆ ಮತ್ತು ಅಧೀಕ್ಷಕರ ಹುದ್ದೆಗಳಿಗೆ ಪೂರಕ ವೃಂದದಿಂದ ಮುಂಬಡ್ತಿ ಪ್ರಕ್ರಿಯೆಯನ್ನು ಪ್ರಾರಂಭಿಸಬೇಕಾಗಿದ್ದು, ಎದ್ದುಕಾಣುವ ಅಂಗವೈಕಲ್ಯವನ್ನುಳ್ಳ ಸರ್ಕಾರಿ ನೌಕರರಿಗೆ ಮುಂಬಡ್ತಿ ನೀಡಲು ನಿಗದಿಪಡಿಸಿದ ರೋಸ್ಟರ್‌ನ ಬಿಂದುಗಳ ಎದುರಾಗಿ ಮುಂಬಡ್ತಿಗೆ ಅರ್ಹರಾದ ಮತ್ತು ಸೂಕ್ತರಾದ ಎದ್ದುಕಾಣುವ ಅಂಗವೈಕಲ್ಯವನ್ನುಳ್ಳ ಸರ್ಕಾರಿ ನೌಕರರನ್ನು ಗುರುತಿಸಬೇಕಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಗ್ರೂಪ್-ಡಿ ಮತ್ತು ಗ್ರೂಪ್-ಸಿ ವೃಂದದಲ್ಲಿ (ಗ್ರೂಪ್-ಡಿ, ಪರಿಚಾರಕರು, ದ್ವಿತೀಯ ದರ್ಜೆ ಸಹಾಯಕರ, ಬೆರಳಚ್ಚುಗಾರರು ವಾಹನ ಚಾಲಕರು ಮತ್ತು ಪ್ರಥಮ ದರ್ಜೆ ಸಹಾಯಕರು ಹುದ್ದೆಗಳಲ್ಲಿ) ಕಾರ್ಯ

ನಿರ್ವಹಿಸುತ್ತಿರುವ ಸರ್ಕಾರಿ ನೌಕರರಲ್ಲಿ ಎದ್ದುಕಾಣುವ ಅಂಗವೈಕಲ್ಯವನ್ನುಳ್ಳ ಸರ್ಕಾರಿ ನೌಕರರ ಹೆಸರು, ಪದನಾಮ, ಕೆ.ಜಿ.ಐ.ಡಿ ಸಂಖ್ಯೆ, ಕಾರ್ಯನಿರ್ವಹಿಸುತ್ತಿರುವ ಕಚೇರಿ / ಕಾಲೇಜು ವಿಳಾಸ ವಿವರಗಳನ್ನೊಳಗೊಂಡ ಪಟ್ಟಿಯನ್ನು ಹಾಗೂ ಸದರಿ ಆದೇಶದನ್ವಯ ಮುಂಬಡ್ತಿ ಮೀಸಲಾತಿಯ ಸೌಲಭ್ಯವನ್ನು ಪಡೆಯಲು ಕೋರಲು ಇಚ್ಛಿಸಿದ, ಎದ್ದುಕಾಣುವ ಅಂಗವೈಕಲ್ಯವನ್ನುಳ್ಳ ಸರ್ಕಾರಿ ನೌಕರನು ಕರ್ನಾಟಕ ರಾಜ್ಯ ಅಂಗವೈಕಲ್ಯವನ್ನುಳ್ಳ ವ್ಯಕ್ತಿಗಳ ಹಕ್ಕುಗಳು ನಿಯಮಗಳು, 2019 ರ ನಿಯಮ 14ರಡಿ, ಅದರಲ್ಲಿ ಉಲ್ಲೇಖಿಸಲಾದ ಪ್ರಮಾಣೀಕರಿಸುವ ಪ್ರಾಧಿಕಾರಕ್ಕೆ (certifying authority) ಅರ್ಜಿಯನ್ನು ಸಲ್ಲಿಸಿ ಅವನು ಅಂಗವೈಕಲ್ಯವನ್ನುಳ್ಳ ಬಗ್ಗೆ ಪಡೆದಿರುವ ಪ್ರಮಾಣ ಪತ್ರವನ್ನು ಸಂಬಂಧಿಸಿದ ನೌಕರರುಗಳಿಂದ ಪಡೆದು ದಿನಾಂಕ:10/07/2023 ರೊಳಗಾಗಿ ಜಂಟಿ ನಿರ್ದೇಶಕರು(ಆಡಳಿತ) ಇವರಿಗೆ ಸಲ್ಲಿಸುವಂತೆ ಜಿಲ್ಲಾ ಉಪ ನಿರ್ದೇಶಕರಿಗೆ ಸೂಚಿಸಿದೆ.

**Signed by Sindhu B Rupesh**
**Date: 30-06-2023 14:38:40**

ನಿರ್ದೇಶಕರು

ಪದವಿ ಪೂರ್ವ ಶಿಕ್ಷಣ ಇಲಾಖೆ

**ಇವರಿಗೆ:**

ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳಿಗೆ.

**ಪ್ರತಿಯನ್ನು:**

1. ನಿರ್ದೇಶಕರು, ಜಂಟಿ ನಿರ್ದೇಶಕರು(ಆಡಳಿತ) / ಜಂಟಿ ನಿರ್ದೇಶಕರು(ಮಾನ್ಯತೆ ಮತ್ತು ಅನುದಾನ) / ಜಂಟಿ ನಿರ್ದೇಶಕರು (ಶೈಕ್ಷಣಿಕ) / ಜಂಟಿ ನಿರ್ದೇಶಕರು(ಮೂಲಭೂತ ಸೌಲಭ್ಯಗಳು) ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಆಪ್ತ ಶಾಖೆಗೆ.
2. ಉಪ ನಿರ್ದೇಶಕರು (ಆಡಳಿತ) / ಉಪ ನಿರ್ದೇಶಕರು (ಮಾನ್ಯತೆ ಮತ್ತು ಅನುದಾನ) / ಉಪ ನಿರ್ದೇಶಕರು (ಶೈಕ್ಷಣಿಕ) ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
3. ಇ-ಆಡಳಿತ ಶಾಖೆಯ ಸಹಾಯಕ ನಿರ್ದೇಶಕರಿಗೆ-ಎಲ್ಲಾ ಜಿಲ್ಲಾ ಉಪ ನಿರ್ದೇಶಕರ ಕಚೇರಿಗೆ ಇ-ಮೇಲ್ ಮಾಡಲು ಹಾಗೂ ಇಲಾಖಾ ಜಾಲತಾಣದಲ್ಲಿ ಪ್ರಕಟಿಸಲು.
4. ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ- ಸಂಬಂಧಪಟ್ಟ ಜಿಲ್ಲಾ ಉಪ ನಿರ್ದೇಶಕರ ಮೂಲಕ.
5. ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯದ ಕಾನೂನು ಶಾಖೆಯ ಶಾಖಾಧಿಕಾರಿಗಳಿಗೆ.
6. ಸಂಬಂಧಿಸಿದ ನೌಕರರಿಗೆ - ಕಚೇರಿ / ಕಾಲೇಜು ಮುಖ್ಯಸ್ಥರ ಮೂಲಕ.
7. ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗ್ರೂಪ್-ಡಿ ಮತ್ತು ಗ್ರೂಪ್-ಸಿ ವೃಂದದ ನೌಕರರಿಗೆ – ಜಂಟಿ ನಿರ್ದೇಶಕರು(ಆಡಳಿತ) ಇವರ ಮೂಲಕ.
8. ಕಚೇರಿ ಪ್ರತಿ.